## (ಊ) ವಿಷಯ: ಓಎನ್‌ಜಿಸಿ ಯೋಜನೆ ಬಗ್ಗೆ

**ಶ್ರೀ ಅಭಯಚಂದ್ರ ಜೈನ್ (ಮೂಡಬಿದ್ರೆ)** : ಮಾನ್ಯ ಅಧ್ಯಕ್ಷರೆ, ರಾಷ್ಟ್ರದ ಪ್ರತಿಷ್ಠಿತ ಓಎನ್‌ಜಿಸಿ ಯೋಜನೆ ಮಂಗಳೂರಿನಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಬಂದು ಶಂಕುಸ್ಥಾಪನೆ ಮಾಡುವಂತಹ ಒಂದು ದೊಡ್ಡ ಕಾರ್ಯಕ್ರಮ ಇತ್ತು. ಅಲ್ಲಿ ಇದ್ದಂತಹ ಮಳೆ ಮತ್ತು ಹವಾಮಾನದ ತೊಂದರೆಯಿಂದಾಗಿ ಪ್ರಧಾನ ಮಂತ್ರಿಗಳಿಗೆ ಮಳೆಯಲ್ಲಿ ಇಳಿಯಲಿಕ್ಕೆ ಆಗದೆ ಇದ್ದಂತಹ ಸಂದರ್ಭದಲ್ಲಿ ಮಂಗಳೂರಿಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಎಲ್ಲರು ಬಂದಿದ್ದರು. ಆದರೆ ಆ ಕಾರ್ಯಕ್ರಮ ಜಾಗದಲ್ಲಿ ಆಡಳಿತ ಪಕ್ಷದ ಶಾಸಕರು ಹಾಗು ಸಂಸತ್ ಸದಸ್ಯರು ಧರಣಿ ಮಾಡಿದಂತಹ ವಿಶೇಷವಾದ ಒಂದು ಪರಿಸ್ಥಿತಿ ಅಲ್ಲಿ ಉದ್ಭವಿಸಿತು. ತದ ನಂತರ ಅಲ್ಲಿ ನಮ್ಮ ಓಎನ್‌ಜಿಸಿಯ ಅಧ್ಯಕ್ಷರನ್ನು ಕೂಡ ಅಲ್ಲಿಗೆ ಕರೆಸಿ ಬಹಳ ತರಾಟೆಗೆ ತೆಗೆದುಕೊಂಡಂತಹ ಸಂಗತಿ ಬಹಳ ದುರದೃಷ್ಟಕರವದ್ದು. ಅಲ್ಲಿ ಸಂಸತ್ ಸದಸ್ಯರು ಹೇಳುತ್ತಾರೆ, ಈ ಓಎನ್‌ಜಿಸಿಯನ್ನು ನಾನು ಮಂಗಳೂರಿಗೆ ತರಿಸಿದೆ. ನನ್ನನ್ನೇ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಡಲಿಲ್ಲ ಎಂಬ ಉದ್ವಟತನದ ಮಾತುಗಳನ್ನು ಪೇಪರ್‌ನಲ್ಲಿ ನೋಡಿದ್ದೇವೆ. ಅಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರೂ ಕೂಡ ಧರಣಿ ಸಂದರ್ಭದಲ್ಲಿ ಇದ್ದದ್ದನ್ನು ಎಲ್ಲಾ ದೂರದರ್ಶನ ಹಾಗೂ ಪೇಪರ್‌ನಲ್ಲಿ ನೋಡಿದ್ದೇವೆ. ಈ ಓಎನ್‌ಜಿಸಿ ಕರ್ನಾಟಕಕ್ಕೆ ಬರಬೇಕಾದರೆ, ವಿಧಾನಸಭೆಯಲ್ಲಿ ದಿನಗಟ್ಟಲೇ ಚರ್ಚೆಯಾಯಿತು. ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಧರ್ಮ್‌ಸಿಂಗ್‌ರವರು, ಅಂದಿನ ನಮ್ಮ ಅರ್ಥ ಸಚಿವರಾದ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ತುಂಬಾಸಲ ಅದಕ್ಕಾಗಿ ದೆಹಲಿಗೆ ಹೋಗಿ ಅದರ ಬಗ್ಗೆ ಹೋರಾಟ ಮಾಡಿ ಸನ್ಮಾನ್ಯ ಆಸ್ಕರ್ ಫರ್ನಾಂಡಿಸ್‌ರವರ ಮುಖಾಂತರ, ಮಾನ್ಯ ಜನಾರ್ಧನ ಪೂಜಾರಿಯವರ ಮುಖಾಂತರ ಮಾಜಿ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ವೀರಪ್ಪ ಮೊಯಿಲಿ ಯವರ ಸಹಕಾರದಿಂದ ತಮಿಳುನಾಡಿಗೆ ಹೋಗುವಂತಹ ಓಎನ್‌ಜಿಸಿಯನ್ನು ಕರ್ನಾಟಕಕ್ಕೆ ತಂದು ಕೊಟ್ಟಂತಹ ಇತಿಹಾಸ ವಿಧಾನ ಸಭೆಯಲ್ಲಿ ಚರ್ಚೆಯಾಗಿತ್ತು. ಆದರೆ ಅಲ್ಲಿಯ ಸಂಸತ್ ಸದಸ್ಯರು ಅದು ನನ್ನಿಂದಾಗಿ ಮಂಗಳೂರಿಗೆ ಬಂದಿತು, ನನ್ನನ್ನು ಈ ಕಾರ್ಯಕ್ರಮಕ್ಕೆ ಕರೆಯಲಿಲ್ಲ ಎಂಬ ಉದ್ವಟತನದ ಮಾತುಗಳನ್ನು ಆಡಿದ್ದು, ಬಹಳ ದುರದೃಷ್ಟವೆಂದು ನಾನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿ)** : ಸನ್ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಶುಕ್ರವಾರ ಮಂಗಳೂರಿನಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಓಎನ್‌ಜಿಸಿ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಬೇಕಾಗಿತ್ತು. ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನಿಯವರನ್ನು ಮಂಗಳೂರಿನ ಏರ್‌ಪೋರ್ಟ್‌ನಲ್ಲಿ ರಿಸೀವ್ ಮಾಡಿಕೊಂಡು ಆ ಕಾರ್ಯಕ್ರಮದಲ್ಲಿ ಭಾಗವಹಿಸುವೆಕೆಂದು ಒಂದು ಗಂಟೆ ಮುಂಚಿತವಾಗಿ ಹೋಗಿ ಮಂಗಳೂರು ಏರ್ ಪೋರ್ಟ್‌ನಲ್ಲಿ ಕಾಯುತ್ತಿದ್ದೆವು. ಪ್ರಧಾನಿಯವರ ವಿಮಾನ ಮಂಗಳೂರಿಗೆ ತಲುಪುವ

ದಿವಸ ಹವಾಮಾನದ ವೈಪರೀತ್ಯದ ಕಾರಣ ಸುಮಾರು ಮುಕ್ಕಾಲು ಗಂಟೆ ಪ್ರಯತ್ನ ಮಾಡಿದರೂ ಸಹ ವಿಮಾನ ಇಳಿಯಲಿಲ್ಲ. ಹಾಗಾಗಿ ಅವತ್ತು ಓಎನ್ ಜಿಸಿ ಕಾರ್ಯಕ್ರಮ ಉದ್ಘಾಟನೆ ಆಗಲಿಲ್ಲ. ಆದರೆ ಆ ಭಾಗದಲ್ಲಿ ಕಾರ್ಯಕ್ರಮ ಉದ್ಘಾಟನೆ ಆಗಲೇಬೇಕೆಂದು ಸಾವಿರಾರು ಸಂಖ್ಯೆಯಲ್ಲಿ ಜನ ಏನು ಸೇರಿದ್ದರು ಅವರು ಈ ಕಾರ್ಯಕ್ರಮ ಉದ್ಘಾಟನೆ ಆಗಲೇ ಬೇಕು. ಯಾವುದೇ ಕಾರಣಕ್ಕೂ ಮುಂದೆ ಹೋಗಬಾರದು ಎಂದು ಒತ್ತಾಯ ಮಾಡಿದ್ದೂ ಸಹ ನಮ್ಮ ಗಮನಕ್ಕೆ ಬಂದಿದೆ. ಆದರೆ ಇಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಯಾವುದೇ ಜಿಲ್ಲೆಯಲ್ಲಿ ಯಾವುದೇ ಕೈಗಾರಿಕೆಗಳು, ಯಾವುದೇ ಕೈಗಾರಿಕೋದ್ಯಮಿಗಳು ಬಂದಾಗ ಅಲ್ಲಿರುವಂತಹ ಸಂಸತ್ ಸದಸ್ಯರನ್ನು, ಅಲ್ಲಿರುವಂತಹ ಚುನಾಯಿತ ಪ್ರತಿನಿಧಿಗಳನ್ನು ಗೌರವದಿಂದ ಬರ ಮಾಡಿಕೊಳ್ಳ ಬೇಕಾಗುತ್ತೆ, ಆಮಂತ್ರಣ ಕೊಡಬೇಕಾಗುತ್ತದೆ, ಅವರಿಗೆ ಅವರದೇ ಆದ ಸ್ಥಾನಮಾನಗಳನ್ನು ನೀಡಬೇಕಾಗುತ್ತದೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಷಯ. ಅವರಿಗೆ ಖುಷಿ ಬಂದ ಹಾಗೆ ನಡೆದುಕೊಳ್ಳುವುದಕ್ಕಾಗುವುದಿಲ್ಲ. ಬಹುಶಃ ಆವತ್ತು ನಮ್ಮ ಪ್ರಧಾನಿಗಳಾದ ಮಾನ್ಯ ಮನಮೋಹನ್‌ಸಿಂಗ್‌ರವರ ವಿಶೇಷ ಪ್ರಯತ್ನ ಆಗದೇ ಇದ್ದಿದ್ದರೆ ಯಾವ ರೀತಿ ಓಎನ್‌ಜಿಸಿ ಯೋಜನೆ ತಮಿಳುನಾಡಿಗೆ ಹೊರಟು ಹೋಗುತ್ತಿತ್ತು ಎಂಬುದು ಗೊತ್ತಿದೆ. ಆ ಟೈಮ್‌ನಲ್ಲಿ ನನಗೆ ನೆನಪು ಇದೆ. ಅಲ್ಲಿಯ ಸಂಸತ್ ಸದಸ್ಯರಾದ ಮಾನ್ಯ ಸದಾನಂದಗೌಡರು ಆ ಶಾಸಕರ ಜೊತೆ ಓಡಾಟ ಮಾಡಿ ಬೆನ್ನತ್ತಿ, ಪ್ರಧಾನಿಯವರನ್ನು ಭೇಟಿ ಮಾಡಿ, ಎಲ್ಲಾ ಪ್ರಮುಖರನ್ನು ಭೇಟಿ ಮಾಡಿ at any cost ಇದು ಮಂಗಳೂರಿನಿಂದ ಬೇರೆ ಕಡೆ ಹೋಗಬಾರದು ಎಂದು ಅವರದೇ ಆದಂತಹ .....

(ಗೊಂದಲ)

ನಾನು ಉತ್ತರ ಕೊಡದೆ ಇದ್ದರೆ ಹೇಗೆ Mr. Abhayachandra, you cannot interfere like that ಡಾ: ಕೆ. ಅನ್ನದಾನಿ: ಓಎನ್‌ಜಿಸಿಗೆ ಒಡಂಬಡಿಕೆ ಆದದ್ದು ಎನ್‌ಡಿಎ ಸರ್ಕಾರ ಇದ್ದಾಗ.

**ಶ್ರೀ ವಿ. ಸುನಿಲ್ ಕುಮಾರ್** : ಇವರದೇ ಆದ ಕಾರ್ಯಕ್ರಮ ಆಗಬೇಕಾದರೆ ಆಹ್ವಾನ ಪತ್ರಿಕೆ ಕೂಡ ಕೊಡಲಿಲ್ಲ. ಮಣಿ ಶಂಕರ್ ಅಯ್ಯರ್‌ರವರು ಈ ಯೋಜನೆಯನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳುವಂತಹ ಸಂದರ್ಭದಲ್ಲಿ ಮಾನ್ಯ ಸದಾನಂದಗೌಡರು ಅಲ್ಲಿರುವಂತಹ ಎಲ್ಲಾ ಶಾಸಕರನ್ನು ಕರೆದುಕೊಂಡು ಹೋಗಿ, ಪ್ರಧಾನ ಮಂತ್ರಿಗಳ ಬಳಿ ನಿಯೋಗ ತೆಗೆದುಕೊಂಡು ಹೋಗಿದ್ದರು. ಕಾಂಗ್ರೆಸ್‌ನವರ ಕೊಡುಗೆ ಏನೂ ಇಲ್ಲ. ನಾವು ಮೌನವಾಗಿ ಇದ್ದಿದ್ದರೆ ಇಡೀ ಯೋಜನೆ ತಮಿಳುನಾಡಿಗೆ ಹೋಗುತ್ತಿತ್ತು. ಕಾಂಗ್ರೆಸ್ ಮಾಡಿರುವ ಪ್ರಯತ್ನ ಶೂನ್ಯ. ಎನ್‌ಡಿಎ ಸರ್ಕಾರ ಇದ್ದಾಗ ಒಪ್ಪಂದ ಆಗಿದ್ದು. ಕಾಂಗ್ರೆಸ್ ನವರ ಕೈಗೆ ಬಿಟ್ಟಿದ್ದರೆ ಆ ಯೋಜನೆ ತಮಿಳುನಾಡಿಗೆ ಹೋಗುತ್ತಿತ್ತು. ಅಲ್ಲಿರುವಂತಹ ಶಾಸಕರು ಹಾಗೂ ಸಂಸದರನ್ನು

ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿರುವ ಸದಾನಂದಗೌಡರು ಹೋಗದೆ ಇದ್ದಿದ್ದರೆ. ಇಡೀ ಯೋಜನೆ ತಮಿಳುನಾಡಿಗೆ ಹೋಗುತ್ತಿತ್ತು.

**(ಗೊಂದಲ)**

**ಮಾನ್ಯ ಸದಸ್ಯರು** : ಇದಕ್ಕೂ ಎನ್.ಡಿ.ಎ. ಸರ್ಕಾರಕ್ಕೂ ವಿನೂ ಸಂಬಂಧ ಇಲ್ಲ.

**ಉಪಾಧ್ಯಕ್ಷರು** : ಮಾನ್ಯ ಅಭಯಚಂದ್ರರವರೇ, ಪ್ರಶ್ನೆ ಹಾಕಿದ್ದೀರಿ, ನಿಮ್ಮ ಪ್ರಶ್ನೆಗೆ ಅವರು ಉತ್ತರ ಕೊಡುತ್ತಾರೆ. ಇನ್ನು ಉತ್ತರ ಪೂರ್ಣವಾಗಿಲ್ಲ, ಮಧ್ಯೆದಲ್ಲಿ ಸುಮ್ಮ ಸುಮ್ಮನೆ ಎದ್ದು ಏಕೆ ಸುಮ್ಮನೆ ಗಲಾಟೆ ಮಾಡುತ್ತೀರಿ? ಪ್ರಶ್ನೆ ಕೇಳಿರುವವರು ಅವರು ಉತ್ತರ ಕೊಡುತ್ತಿದ್ದಾರೆ. ಅವರಿಬ್ಬರೇ ಮಾತನಾಡಲಿ, ನೀವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಉಪಾಧ್ಯಕ್ಷರೆ, ನಾನು ಅಭಯಚಂದ್ರ ರವರಿಗೆ, ಮಾನ್ಯ ಹಿರಿಯ ಸದಸ್ಯರಿಗೆ ನೋವಾಗುವಂತಹ ಯಾವುದೇ ಮಾತನಾಡಿಲ್ಲ. ಆ ಕಾರ್ಯಕ್ರಮ ಅವತ್ತು ನಡೆಯದೆ ಇರುವುದಕ್ಕೆ ಯಾರೂ ಅದಕ್ಕೆ ಕಾರಣರಲ್ಲ. ಹವಾಮಾನದ ವೈಪರೀತ್ಯದಿಂದ ಸ್ವತಃ ಪ್ರದಾನಿಯವರು ವಿಶೇಷ ಪ್ರಯತ್ನ ಮಾಡಿ, ಈ ಓಎನ್‌ಜಿಸಿ ಯೋಜನೆ ಮಂಗಳೂರಿಗೆ ಬರುವುದಕ್ಕೆ ಏನು ಕಾರಣಕರ್ತರಾದರು ಅವರಿಂದಲೇ ಉದ್ಘಾಟನೆ ಆಗಬೇಕೆಂಬುದು ನಮ್ಮ ಆಸೆ ಇತ್ತು. ಅವರು ಎಲ್ಲಾ ಪ್ರಯತ್ನ ಮಾಡಿದರು, ಅವತ್ತು ಹವಾಮಾನದ ವೈಪರೀತ್ಯದಿಂದ ಕಾರ್ಯಕ್ರಮ ನಡೆಯಲಿಲ್ಲ ಅಷ್ಟಾದರೂ ಕಾರ್ಯಕ್ರಮ ನಡೆಯಲೇಬೇಕೆಂದು ಹೇಳಿದಾಗ ನಾನೂ ಮಾನ್ಯ ಮುಖ್ಯ ಮಂತ್ರಿಗಳು ಒಟ್ಟಾಗಿ ಕೂತು ಓಎನ್ ಜಿಸಿ ಕಂಪನಿಯವರ ಜೊತೆ ಮಾತನಾಡಿ, ಪ್ರಧಾನಿಯವರೇ ಅಪೇಕ್ಷೆ ಪಟ್ಟು ಇಲ್ಲಿಗೆ ಬಂದಾಗ ಇನ್ನು ಒಂದು 15 ದಿವಸ ತಡವಾದರೂ ಪರವಾಗಿಲ್ಲ, ಅವರೇ ಬಂದು ಉದ್ಘಾಟನೆ ಮಾಡಬೇಕೆಂದು ಅವರಿಗೆ ಮನವರಿಕೆ ಮಾಡಿ, ಅಲ್ಲಿ ಹೋರಾಟ ಮಾಡುವುದಕ್ಕೆ ಪ್ರಯತ್ನ ಮಾಡಿದಂತಹವರಿಗೆ ನಾವು ತಿಳಿಸಿ. ಈ ವಿಶೇಷ ಕಾರಣಕ್ಕಾಗಿ ಇದನ್ನು ಉದ್ಘಾಟನೆ ಮಾಡುವುದಕ್ಕಾಗಲಿಲ್ಲವೆಂದು ಮನವರಿಕೆ ಮಾಡುವಂತಹ ಪ್ರಯತ್ನವನ್ನು ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದೇವೆ. ನಾನು ಸನ್ಮಾನ್ಯ ಅಭಯ ಚಂದ್ರರವರಲ್ಲಿ ವಿನಂತಿ ಮಾಡುವಂಥದ್ದು. ಈ ರೀತಿ ನಮ್ಮ ರಾಜ್ಯದ ಅಭಿವೃದ್ಧಿ ಕಾರ್ಯಗಳ ಪ್ರಶ್ನೆ ಬಂದಾಗ ನಾವು ಅಲ್ಲಿಯ ಸಂಸತ್ ಸದಸ್ಯರು, ಆ ಶಾಸಕರು, ಯಾವುದೇ ಪಕ್ಷದಲ್ಲಿರಲಿ, ಅವರೆಲ್ಲರನ್ನೂ ನಾವು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ. ಈ ಓಎನ್‌ಜಿಸಿ ಕಾರ್ಖಾನೆ ಯಾರದೋ ಪ್ರಭಾವದಿಂದ ತಮಿಳುನಾಡಿಗೆ ಹೊರಟು ಹೋಗುತ್ತದೆ ಎಂದು ಪ್ರಯತ್ನಗಳು ನಡೆದಾಗ ಅಲ್ಲಿಯ ಸಂಸತ್ ಸದಸ್ಯರು ಅವರ ಕರ್ತವ್ಯವನ್ನು ಮಾಡಿ ಅದನ್ನು ಉಳಿಸಿದ್ದಾರೆ.ಅವರದ್ದೂ ಪ್ರಯತ್ನ ಇದೆ. ಸ್ವಲ್ಪ ಕುಳಿತುಕೊಳ್ಳಿ ನೀವು. ನಾನು ಮಾತನಾಡಿ ಪೂರ್ಣ ಆದ ಮೇಲೆ ನೀವು ಮಾತನಾಡಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ ಎಂದರೆ ನಾನು ಕುಳಿತುಕೊಳ್ಳುತ್ತೇನೆ. ನಾನು ಪ್ರಾಮಾಣಿಕವಾಗಿ ಆ ಸಂಸತ್ ಸದಸ್ಯರು ಮಾಡಿರುವಂತಹ ಪ್ರಯತ್ನವನ್ನು ನಾನು ಹೇಳಿದೆ.

ಓಎನ್‌ಜಿಸಿಗೆ ಸಂಬಂಧಪಟ್ಟ ಹಾಗೆ ಈ ರೀತಿ ಕಾರ್ಯಕ್ರಮಗಳು ನಡೆದಾಗ, ಅವರು ಯಾರೇ ಆಗಲಿ, ಯಾವುದೇ ಪಕ್ಷದವರಿರಲಿ, ಅಲ್ಲಿಯ ಸಂಸತ್ ಸದಸ್ಯರನ್ನು ಶಾಸಕರನ್ನು, ಮೇಲೆ ಸ್ಟೇಜ್ ನಲ್ಲಿ ಪ್ರಧಾನ ಮಂತ್ರಿಗಳ ಅಕ್ಕ ಪಕ್ಕದಲ್ಲಿ ಯಾರು ಕುಳಿತುಕೊಳ್ಳಬೇಕೆಂದು ಪ್ರಧಾನ ಮಂತ್ರಿಯವರ ಕಛೇರಿಯವರು ನಿರ್ಧಾರ ಮಾಡುತ್ತಾರೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ ಆದರೆ ಯಾವ ಗೌರವವನ್ನು ಕೊಡಬೇಕು, ಆ ಗೌರವವನ್ನು ಕೊಡುವುದು ಬಹಳ ಒಳ್ಳೆಯದು. ಆ ಕೆಲಸ ಅಲ್ಲಿ ಆಗಲಿಲ್ಲ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದೆ. ಅವರ ಹೆಸರೂ ಪ್ರಿಂಟ್ ಆಗಲಿಲ್ಲ. ನನ್ನ ಹತ್ತಿರ ಬಂದಿದ್ದರು. ಇದು ಧರ್ಮ ಅಲ್ಲ. ನಾನೂ ಒಬ್ಬ ಉಪಮುಖ್ಯಮಂತ್ರಿಯಾಗಿ ಆ ಕಾರ್ಯಕ್ರಮಕ್ಕೆ ಬರುವುದಿಲ್ಲವೆಂದು ನಾನು ಹೇಳಬೇಕಾಗಿತ್ತು. ಕೊನೆಗೆ ಮತ್ತೊಮ್ಮೆ ಇನ್ ವಿಟೇಷನ್ ಪ್ರಿಂಟ್ ಮಾಡಿಕೊಂಡು ಬಂದರು. ಆದ್ದರಿಂದ ನಾನು ಏನು ಹೇಳುವುದಕ್ಕೆ ಹೊರಟಿದ್ದೆನೆಂದರೆ, ಅವತ್ತು ಕಾರ್ಯಕ್ರಮ ಮುಂದೆ ಹೋಗಿದ್ದಕ್ಕೆ ಪ್ರಧಾನಮಂತ್ರಿಯವರು ಆಸಕ್ತಿ ವಹಿಸಿದ್ದರೂ ಸಹ ಹವಾಮಾನದ ವೈಪರೀತ್ಯದಿಂದ ಅಂದು ಆಗಲಿಲ್ಲ. ಮತ್ತೊಮ್ಮೆ ಪ್ರಧಾನ ಮಂತ್ರಿಗಳಾದ ಮಾನ್ಯ ಮನಮೋಹನ್‌ಸಿಂಗ್‌ರವರನ್ನು ಕರೆಸಿ ಅಲ್ಲಿ ಉದ್ಘಾಟನೆ ಮಾಡಿಸುತ್ತೇವೆ. ಮತ್ತು ಆ ಭಾಗದ ಶಾಸಕರು, ಲೋಕಸಭಾ ಸದಸ್ಯರು, ಎಲ್ಲರಿಗೂ ಗೌರವ ಸೂಚಿಸುವಂತೆ ಕಾರ್ಯಕ್ರಮ ನಡೆಯುವ ಹಾಗೆ ನೋಡಿಕೊಳ್ಳಬೇಕೆಂದು ಓಎನ್‌ಜಿಸಿಯವರಿಗೆ ಸೂಚನೆ ಕೊಡುತ್ತೇವೆ. ಇಷ್ಟು ಮಾತ್ರ ಈ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಉಪಾಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ನಿಯಮಾವಳಿಗಳ ಪ್ರಕಾರ ಮಾತನಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ನಾನು ಸಹಿ ಹಾಕಿಲ್ಲ. ಆದರೆ ತಾವು ಅನುಮತಿಯನ್ನು ಕೊಟ್ಟರೆ ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ನಾನು ಬಯಸುತ್ತೇನೆ.

**ಉಪಾಧ್ಯಕ್ಷರು** : ಮಾನತಾಡಿ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮೊದಲನೆಯದಾಗಿ ಈ ಓ.ಎನ್.ಜಿ.ಸಿ. ವಿಚಾರದಲ್ಲಿ ಮೊದಲನೆಯದಾಗಿ ಈ ಸದನದಿಂದ ಕೇಂದ್ರ ಸರ್ಕಾರಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕು. ಏಕೆಂದರೆ ಬಹುಶಃ ಮೊದಲನೆಯ ಬಾರಿಗೆ 58 ವರ್ಷಗಳ ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ ಇಷ್ಟೊಂದು ಬಾರಿ ಪ್ರಮಾಣದ ಅದೂ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಓ.ಎನ್.ಜಿ.ಸಿ. ಸಂಸ್ಥೆ ಕರ್ನಾಟಕದಲ್ಲಿ ಬಂಡವಾಳವನ್ನು ಹೂಡುತ್ತಾ ಇರತಕ್ಕಂಥದ್ದು ಮೊದಲನೆಯ ಬಾರಿಗೆ. ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಪ್ರಧಾನಮಂತ್ರಿಗಳಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಮೊದಲನೆಯ ವಿಷಯ. ಇನ್ನು ಎರಡನೆಯದಾಗಿ ಬಹಳ ಪ್ರಮುಖವಾದ ಎರಡು ಅಂಶಗಳನ್ನು ಹೇಳಬಯಸುತ್ತೇನೆ. ಒಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿರತಕ್ಕಂಥ ಅಭಿಪ್ರಾಯವನ್ನು ನಾನೂ ಕೂಡ ಒಪ್ಪುತ್ತೇನೆ. ಅಷ್ಟೇ ಕೇಂದ್ರ ಸರ್ಕಾರದ ಬಾರಿ ಉದ್ದಿಮೆಯಾಗಿದ್ದರೂ ಕೂಡ ನಾಳೆ ಆ ಓ.ಎನ್.ಜಿ.ಸಿ. ಯವರು ಆ

ಯೋಜನೆಯನ್ನು ಇಂಪ್ಲಿಮೆಂಟ್ ಮಾಡಬೇಕಾದರೂ ಕೂಡ ಅಲ್ಲಿರತಕ್ಕಂಥ ಲೋಕಸಭಾ ಸದಸ್ಯರು, ಮೇಯರ್, ವಿಧಾನಸಭಾ ಸದಸ್ಯರುಗಳ ಸಹಕಾರ ಸಂಪೂರ್ಣವಾಗಿ ಆ ಸಂಸ್ಥೆಯವರಿಗೆ ಬೇಕಾಗುತ್ತದೆ. ಆದುದರಿಂದ ಅವರಿಗೆ ಆಮಂತ್ರಣವನ್ನು ಕೊಟ್ಟು ಅವರು ಎಷ್ಟೇ ದೊಡ್ಡವರಾಗಿರಲಿ ಅವರಿಗೆ ಆಮಂತ್ರಣ ಕೊಟ್ಟು ಗೌರವ ಕೊಡಬೇಕು ಆದರೆ ಆ ರೀತಿ ಶಾಸಕರಿಗೆ ಯಾವ ರೀತಿ ಗೌರವ ಕೊಡಬೇಕೋ ಆ ರೀತಿ ಗೌರವ ಕೊಡದೇ ಇರುವುದು ತಪ್ಪು. ಆದುದರಿಂದ ತಾವು ದಯಮಾಡಿ, ಮುಖ್ಯಮಂತ್ರಿಗಳು ಮತ್ತು ತಾವು, ಅವರಿಗೆ ಕಿವಿ ಮಾತಿನಲ್ಲಿ ಒರಲಿ, ಅವರಿಗೆ ಇದನ್ನು ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ. ಆದರೆ ನಾನು ಎದ್ದುನಿಂತು ಹೇಳಬೇಕಾದಂಥ ಕೊನೆಯದಾದ ಪ್ರಮುಖವಾದ ಅಂಶವೇನೆಂದರೆ ಈ ಓ.ಎನ್.ಜಿ.ಸಿ.ಯಲ್ಲಿ ಈಗ ನಿವೇನು ಪ್ರಾಜೆಕ್ಟ್‌ನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಹೊರಟಿರತಕ್ಕಂಥದ್ದು ಕೇವಲ ಒಂದಂಶ ಒರಿಜಿನಲ್ ಆಗಿ ಕರ್ನಾಟಕಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಅಲ್ಲಿರತಕ್ಕಂಥ ಕೆನರಾ ಛೇಂಬರ್ ಆಫ್ ಕಾಮರ್ಸ್‌ಗೂ ಸ್ಪೆರಲ್ ಎಕನಾಮಿಕ್ ಜೋನ್‌ನ್ನು ಮಾಡತಕ್ಕಂಥದ್ದು ಮತ್ತು ಪವರ್‌ನ್ನು ಮ್ಯಾನುಫ್ಯಾಕ್ಚರ್ ಮಾಡುವುದಕ್ಕೆ ಲಿಕ್ವಿಡ್ ಗ್ಯಾಸ್‌ನ್ನು ಹೊರಗಡೆ ದೇಶದಿಂದ ತರಿಸಿಕೊಂಡು ನಮ್ಮಲ್ಲಿ ಪವರ್ ಪ್ರೊಡಕ್ಷನ್‌ನ್ನು ಮಾಡುವುದಕ್ಕೆ ಆಗಿರತಕ್ಕಂಥ ಅಗ್ರಿಮೆಂಟ್ ಏನಿದೆ, ಆ ಆಗ್ರಿಮೆಂಟ್‌ನ್ನು ಇಂಪ್ಲಿಮೆಂಟ್ ಮಾಡದೇ ಹೋದರೆ ಅವರು ಏನು ಹೇಳಿರತಕ್ಕಂಥ 46 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಏನಿದೆ ಅದು ಬರುವುದಿಲ್ಲ ಮತ್ತು ಅಲ್ಲಿ ಸ್ಥಳೀಯವಾಗಿ ಯಾವುದೇ ರೀತಿಯ ಉಪಯೋಗ ಕೂಡ ಆಗುವುದಕ್ಕೆ ಸಾಧ್ಯವಿಲ್ಲ. ಇದು ಕೇವಲ ಒಂದು ಕಾರ್ಯಕ್ರಮ, ಪ್ರಚಾರಕ್ಕೋಸ್ಕರ ಆಗುತ್ತದೆ. ಆದುದರಿಂದ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಮನವಿಯನ್ನು ನಾನು ಮಾಡಿಕೊಳ್ಳುವುದೇನೆಂದರೆ ಓ.ಎನ್. ಜಿ.ಸಿ. ಅಧಿಕಾರಿಗಳು ಕರ್ನಾಟಕದ ಪರವಾಗಿದ್ದಾರೆ. ಓ.ಎನ್.ಜಿ.ಸಿ.ಯಲ್ಲಿ ಹಿಂದೆ ಇದ್ದಂಥ ಅಧಿಕಾರಿಗಳು ನಮ್ಮ ಪರವಾಗಿ ಇಲ್ಲದೇ ಹೋಗಿದ್ದರೆ ಇದು ಖಂಡಿತವಾಗಿ ಬರುತ್ತಿರಲಿಲ್ಲ. ಆದುದರಿಂದ ತಾವು ದಯಮಾಡಿ ದೆಹಲಿಗೆ ಹೋದಂಥ ಸಂದರ್ಭದಲ್ಲಿ ಅಥವಾ ಮುಖ್ಯಮಂತ್ರಿಗಳು ದೆಹಲಿಗೆ ಹೋದಾಗ ಅವರನ್ನು ಗುಡ್ ಹ್ಯೂಮರ್‌ನಲ್ಲಿಟ್ಟುಕೊಂಡು ಟೋಟಲ್ ಇನ್ ವೆಸ್ಟ್‌ಮೆಂಟ್ ಏನಿದೆ ಅದನ್ನು ಇಂಪ್ಲಿಮೆಂಟ್ ಮಾಡುವ ಹಾಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

## (ಖಖ) ವಿಷಯ : ರಾಯಭಾಗ ತಾಲ್ಲೂಕಿನಲ್ಲಿ ಚೆನ್ನದಾಸ ಜನಾಂಗದವರಿಗೆ ಪರಿಶಿಷ್ಟ ಜಾತಿ ಸರ್ಟಿಫಿಕೆಟ್ ನೀಡದೇ ಇರುವ ಬಗ್ಗೆ

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** : ಮಾನ್ಯ ಉಪಾಧ್ಯಕ್ಷರೆ, ರಾಯಭಾಗ್ ತಾಲ್ಲೂಕಿನಲ್ಲಿ ಚೆನ್ನದಾಸ ಎನ್ನುವ ಜನಾಂಗದವರು ಇದ್ದಾರೆ. ಅವರು ಪರಿಶಿಷ್ಟ ಜಾತಿಗೆ ಸೇರಿದಂಥ ಜನಾಂಗದವರಾಗಿದ್ದಾರೆ.ಅಲ್ಲಿ ತಹಶೀಲ್ದಾರರು ಅವರಿಗೆ ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಸರ್ಟಿಫಿಕೇಟ್ ಕೊಡದೇ ಇರುವುದರಿಂದ ಆ ಮಕ್ಕಳಿಗೆ ಶಿಕ್ಷಣ ನಡೆಸಲು ಬಹಳ